# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006

ಸಂಖ್ಯೆ:ಕರಾಮುವಿ/ಪವಿ/5.1/ಯು.ಜಿ/ಪಿ.ಜಿ/128/2019-20 ದಿನಾಂಕ:-22-07-2020

## ಅಧಿಸೂಚನೆ

**ವಿಷಯ:- 2014-15ನೇ ಶೈಕ್ಷಣಿಕ ಸಾಲಿನ ಸ್ನಾತಕ (UG) ಪದವಿಗಳಾದ ಬಿ.ಎ/ಬಿ.ಕಾಂ ಅಂತಿಮ ವರ್ಷ ಮತ್ತು 2019-20ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ(PG) ಪದವಿಗಳಾದ ಎಂ.ಎ/ಎಂ.ಕಾಂ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕವನ್ನು ಪಾವತಿಸುವ ಬಗೆಗೆ.**

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 03-07-2020.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಈ ಕೆಳಗಿನ ಸಾಲಿನಲ್ಲಿ ಪ್ರವೇಶಾತಿ ಪಡೆದಿರುವ ಸ್ನಾತಕ(UG)/ ಸ್ನಾತಕೋತ್ತರ (PG) ಪದವಿ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಲು ತಿಳಿಸಲಾಗಿದೆ.

- 2014-15ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪಡೆದ ಬಿ.ಎ/ಬಿ.ಕಾಂ., ಪದವಿಯ ಅಂತಿಮ ವರ್ಷದ ವಿದ್ಯಾರ್ಥಿಗಳು.
- 2019-20ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪಡೆದ ಎಂ.ಎ/ಎಂ.ಕಾಂ, ಪದವಿಯ ಅಂತಿಮ ವರ್ಷದ ವಿದ್ಯಾರ್ಥಿಗಳು.

ಸದರಿ ವಿದ್ಯಾರ್ಥಿಗಳಿಗೆ ಮುಂದಿನ ದಿನಗಳಲ್ಲಿ ಪರೀಕ್ಷೆಗಳನ್ನು ನಿಗದಿಪಡಿಸಲಾಗಿದ್ದು, ಈ ಸಂಬಂಧ ಪರೀಕ್ಷಾ ಶುಲ್ಕ ಪಾವತಿಸುವ ದಿನಾಂಕಗಳು ಮತ್ತು ಪಾವತಿಸಬೇಕಾಗಿರುವ ಶುಲ್ಕದ ವಿವರಗಳು ಈ ಕೆಳಕಂಡಂತಿದ್ದು, ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್ www.ksoumysuru.ac.inನಲ್ಲಿ ಪರೀಕ್ಷಾ ಅರ್ಜಿ ಮತ್ತು ಪರೀಕ್ಷಾ ಶುಲ್ಕವನ್ನು ಎಲ್ಲಾ ಅಗತ್ಯ ವಿವರಗಳೊಂದಿಗೆ ಭರ್ತಿಮಾಡಿ ಕಡ್ಡಾಯವಾಗಿ ಅಂತರ್ಜಾಲದ (**Online**) ಮೂಲಕವೇ ಸಲ್ಲಿಸುವುದು. ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸುವಾಗ ತೊಂದರೆಗಳು ಎದುರಾದಲ್ಲಿ ಆನ್‌ಲೈನ್ ಸಹಾಯವಾಣಿ ಸಂಖ್ಯೆ **9663482133, 9663482311** ಯನ್ನು ಸಂಪರ್ಕಿಸುವುದು.

| | |
|---|---|
| ಪರೀಕ್ಷಾ ಶುಲ್ಕ ಪಾವತಿಸುವ ಪ್ರಾರಂಭದ ದಿನಾಂಕ: | 22-07-2020 |
| ದಂಡ ಶುಲ್ಕವಿಲ್ಲದೆ ಪಾವತಿಗೆ ಕಡೆ ದಿನಾಂಕ: | 10-08-2020 |
| ರೂ:200/- ದಂಡ ಶುಲ್ಕದೊಂದಿಗೆ ಪಾವತಿಗೆ ಕಡೆ ದಿನಾಂಕ: | 24-08-2020 |

**2020 ಸಾಲಿನಲ್ಲಿ ಪ್ರಾರಂಭವಾಗುವ ಸ್ನಾತಕ/ಸ್ನಾತಕೋತ್ತರ ಪರೀಕ್ಷಾ ದಿನಾಂಕಗಳ ವೇಳಾಪಟ್ಟಿಯನ್ನು ವಿ.ವಿ. ನಿಲಯದ ಅಂತರ್ಜಾಲ www.ksoumysuru.ac.in ಪ್ರಕಟಿಸಲಾಗುವುದು.**

### ವಿದ್ಯಾರ್ಥಿಗಳು ಪಾವತಿಸಬೇಕಾಗಿರುವ ಪರೀಕ್ಷಾ ಶುಲ್ಕಗಳ ಕೋಷ್ಟಕ

### ಸ್ನಾತಕ (U.G) ಪದವಿ ಕೋರ್ಸ್‌ಗಳು

| ಕ್ರಮ ಸಂಖ್ಯೆ | ಪದವಿಗಳು | ಪೂರ್ಣಪರೀಕ್ಷೆಗೆ |
|---|---|---|
| 01 | 2014-15ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ಬಿ.ಎ/ಬಿ.ಕಾಂ ಪದವಿಯ ತೃತೀಯ ವರ್ಷದ ವಿದ್ಯಾರ್ಥಿಗಳಿಗೆ ಮಾತ್ರ | ರೂ:- 950/- |

### ಸ್ನಾತಕೋತ್ತರ (P.G) ಪದವಿ ಕೋರ್ಸ್‌ಗಳು

| ಕ್ರಮ ಸಂಖ್ಯೆ | ಪದವಿಗಳು | ಪೂರ್ಣಪರೀಕ್ಷೆಗೆ |
|---|---|---|
| 01 | 2019-20ನೇ ಸಾಲಿನಲ್ಲಿ ಅಂತಿಮ ವರ್ಷಕ್ಕೆ ಪ್ರವೇಶಾತಿ ಪಡೆದ ಎಂ.ಎ/ಎಂ.ಕಾಂ ವಿದ್ಯಾರ್ಥಿಗಳಿಗೆ ಮಾತ್ರ | ರೂ:-1200/- |

**ಪರೀಕ್ಷೆಗಳನ್ನು ಈ ಕೆಳಕಂಡ ಕೇಂದ್ರಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ.**

**ಬೆಂಗಳೂರು, ಬಳ್ಳಾರಿ, ಚಾಮರಾಜನಗರ, ಚಿಕ್ಕಮಗಳೂರು, ಧಾರವಾಡ, ದಾವಣಗೆರೆ, ಹಾಸನ, ಕಲಬುರ್ಗಿ, ಕೋಲಾರ. ಮಂಡ್ಯ, ಮೈಸೂರು, ಮಂಗಳೂರು, ಶಿವಮೊಗ್ಗ, ತುಮಕೂರು, ಉಡುಪಿ,**

### ಸೂಚನೆಗಳು

1. ಕೇಂದ್ರ/ರಾಜ್ಯ ಸರ್ಕಾರವು ಆಗಿಂದ್ದಾಗೆ ಹೊರಡಿಸುವ ಕೋವಿಡ್-19 ನಿರ್ವಹಣೆಯ ನಿಯಮಗಳನ್ನು ಹಾಗೂ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
2. ಅಂತರ್ಜಾಲ (**Online**)ದಲ್ಲಿ ಪರೀಕ್ಷಾ ಅರ್ಜಿ ಭರ್ತಿ ಮಾಡಿ ಶುಲ್ಕ ಪಾವತಿಸಿದ ನಂತರ ಬರುವ ವಿವರದ ಪ್ರತಿಯನ್ನು ಕುಲಸಚಿವರು(ಪರೀಕ್ಷಾಂಗ) ಕರಾಮುವಿ, ಮುಕ್ತ ಗಂಗೋತ್ರಿ, ಮೈಸೂರು-06 ಇಲ್ಲಿಗೆ ಕಡ್ಡಾಯವಾಗಿ ಖುದ್ದಾಗಿ ಅಥವಾ ಅಂಚೆಯ ಮೂಲಕ ಕಳುಹಿಸತಕ್ಕದ್ದು.
3. ವಿಶ್ವವಿದ್ಯಾನಿಲಯವು ನೀಡಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪರೀಕ್ಷೆಗೆ ತರುವುದು.
4. ವಿದ್ಯಾರ್ಥಿಗಳು ಕಡ್ಡಾಯವಾಗಿ ಮೇಲ್ಕಂಡ ಪರೀಕ್ಷಾ ಕೇಂದ್ರಗಳಲ್ಲಿ ಒಂದು ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳಬೇಕು.

5. ಒಂದು ಬಾರಿ ಆಯ್ಕೆಮಾಡಿಕೊಂಡ ಪರೀಕ್ಷಾ ಕೇಂದ್ರವನ್ನು ಬದಲಾಯಿಸಿಕೊಳ್ಳಲು ಅವಕಾಶವಿರುವುದಿಲ್ಲ.
6. ವಿದ್ಯಾರ್ಥಿಯು ಆನ್‌ಲೈನ್ ಮೂಲಕ ಶುಲ್ಕ ಪಾವತಿಸಿ ಸಲ್ಲಿಸಿದ ಅರ್ಜಿಯ ಒಂದು ಪ್ರತಿಯನ್ನು ಹೊಂದಿರತಕ್ಕದ್ದು.
7. ವಿವಿ ನಿಲಯಕ್ಕೆ ನೇರವಾಗಿ / ಅಂಚೆ ಮೂಲಕ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.
8. ಯಾವುದೇ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷಾರ್ಥಿಗಳ ಒಟ್ಟು ಸಂಖ್ಯೆಯು 50ಕ್ಕೂ ಕಡಿಮೆ ಇದ್ದ ಪಕ್ಷದಲ್ಲಿ, ಆ ಕೇಂದ್ರದ ವಿದ್ಯಾರ್ಥಿಗಳನ್ನು ಸಮೀಪದ ಪರೀಕ್ಷಾ ಕೇಂದ್ರಕ್ಕೆ ವರ್ಗಾಯಿಸಲಾಗುವುದು. ಈ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ತಿಳಿಸಲಾಗುವುದು.
9. ಪರೀಕ್ಷಾ ಶುಲ್ಕವನ್ನು ಯಾವ ಕಾರಣದಿಂದಲೂ ಮರುಪಾವತಿ ಮಾಡಲಾಗುವುದಿಲ್ಲ ಹಾಗೂ ಅದನ್ನು ಮುಂದಿನ ಪರೀಕ್ಷೆಗೆ ಮರುಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.
10. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ವಿನಾಯಿತಿ ಸೌಲಭ್ಯ ಪಡೆಯಲು ತಾವು ಪ್ರವೇಶಾತಿ ಪಡೆದ ಸಾಲಿನಲ್ಲಿಯೇ ಕಡ್ಡಾಯವಾಗಿ ಪರೀಕ್ಷೆ ಬರೆದು ತೇರ್ಗಡೆಯಾಗಿರಬೇಕು. ಪ್ರವೇಶ ಪಡೆದ ಸಾಲಿನಲ್ಲಿಯೇ ಹಾಗೂ ವ್ಯಾಸಂಗಾವಧಿಯಲ್ಲಿಯೇ ಪರೀಕ್ಷೆ ಬರೆಯದೇ ನಂತರದ ಪ್ರಯತ್ನದಲ್ಲಿ ಬರೆದಲ್ಲಿ, ಪರೀಕ್ಷಾ ಶುಲ್ಕ ವಿನಾಯಿತಿ ಅರ್ಹತೆ ಇರುವುದಿಲ್ಲ.
11. 2019-20ನೇ ಸಾಲಿನ [ಸ್ನಾತಕೋತ್ತರ (P.G)] ಅಂತಿಮ ವರ್ಷದ ಮತ್ತು 2014-15ನೇ ಸಾಲಿನ ವಿದ್ಯಾರ್ಥಿಗಳು ಸ್ನಾತಕ (U.G) ತೃತೀಯ ವರ್ಷದ ಪದವಿಗೆ ಶುಲ್ಕ ವಿನಾಯಿತಿಯಿಂದ ಪ್ರವೇಶಾತಿ ಪಡೆದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವಾಗಿ ರೂ. 50/-(ಐವತ್ತು ರೂಪಾಯಿಗಳು ಮಾತ್ರ)ಗಳನ್ನು ಕಡ್ಡಾಯವಾಗಿ ಪಾವತಿಸುವುದು. ತಪ್ಪಿದಲ್ಲಿ, ಅಂತಹವರ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
12. 2019-20ನೇ ಸಾಲಿನ [ಸ್ನಾತಕೋತ್ತರ (P.G)] ಅಂತಿಮ ವರ್ಷದ ಮತ್ತು 2014-15ನೇ ಸಾಲಿನ ವಿದ್ಯಾರ್ಥಿಗಳು ಸ್ನಾತಕ (U.G) ತೃತೀಯ ವರ್ಷದ ಪದವಿಗೆ ಶುಲ್ಕ ವಿನಾಯಿತಿ ಪಡೆಯದೇ ಪ್ರವೇಶಾತಿ ಪಡೆದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು ಕಡ್ಡಾಯವಾಗಿ ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸತಕ್ಕದ್ದು.
13. ವಿದ್ಯಾರ್ಥಿಗಳು ಚಾಲ್ತಿಯಲ್ಲಿರುವ ಪಠ್ಯಕ್ರಮ ಹಾಗೂ ಪರೀಕ್ಷಾ ಯೋಜನೆಗೆ ಅನುಗುಣವಾಗಿ ಪರೀಕ್ಷೆ ತೆಗೆದುಕೊಳ್ಳಬೇಕು.
14. ವಿದ್ಯಾರ್ಥಿಗಳು ತಮ್ಮ ಸ್ನಾತಕ (UG) /ಸ್ನಾತಕೋತ್ತರ (PG) ವಿಷಯಕ್ಕೆ ಸಂಬಂಧಿಸಿದಂತೆ ಪರೀಕ್ಷಾ ಪ್ರವೇಶಾತಿ ಪತ್ರಗಳನ್ನು ಪರೀಕ್ಷೆಗಳು ಪ್ರಾರಂಭವಾಗುವ ಎರಡು ದಿನಗಳ ಮುಂಚೆ ವಿ.ವಿ. ನಿಲಯದ ಅಂತರ್ಜಾಲ www.ksoumysuru.ac.in ನಿಂದ ಪಡೆಯಬಹುದಾಗಿದೆ.
15. ಪರೀಕ್ಷಾ ಕೇಂದ್ರಗಳಿಗೆ ಮೊಬೈಲ್ ಫೋನ್ ತರುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಮೊಬೈಲ್ ಫೋನ್ ಪರೀಕ್ಷಾ ಕೇಂದ್ರಗಳಿಗೆ ತರುವುದು ದುರ್ನಡತೆ (Malpractice) ಯಾಗುತ್ತದೆ. ಅಂತಹ ವಿದ್ಯಾರ್ಥಿಗಳ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುತ್ತದೆ.
16. ವಿದ್ಯಾರ್ಥಿಗಳು ಮೇಲಿನ ಪರೀಕ್ಷಾ ಕೇಂದ್ರಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕು ಹಾಗೂ ಆಯ್ಕೆ ಮಾಡಿಕೊಂಡ ಪರೀಕ್ಷಾ ಕೇಂದ್ರದಲ್ಲಿಯೇ ಪರೀಕ್ಷೆ ಬರೆಯಬೇಕು. ಪರೀಕ್ಷಾ ಕೇಂದ್ರ ಬದಲಾವಣೆಗೆ ಅವಕಾಶವಿರುವುದಿಲ್ಲ. ಆದರೆ ವಿಶೇಷ ಸಂದರ್ಭದಲ್ಲಿ ನಿಗದಿತ ಶುಲ್ಕ ರೂ.1000/-ಗಳನ್ನು ಪರೀಕ್ಷಾ ಶುಲ್ಕದೊಂದಿಗೆ ದಂಡಶುಲ್ಕವನ್ನು (ದಂಡಶುಲ್ಕ ರಹಿತ ದಿನಾಂಕ ಮೀರಿದ್ದಲ್ಲಿ) ಪರೀಕ್ಷೆ ಪ್ರಾರಂಭವಾಗುವ 15 ದಿನಗಳ ಮುಂಚೆ ಲಿಖಿತ ಪೂರ್ವಾನುಮತಿಯೊಂದಿಗೆ ಪಾವತಿಸಿದಲ್ಲಿ ಪರೀಕ್ಷಾ ಕೇಂದ್ರ ಬದಲಾವಣೆಗೆ ಅನುಮತಿ ನೀಡಲಾಗುವುದು.

**ಸಹಿ/–**

**ಕುಲಸಚಿವರು(ಪರೀಕ್ಷಾಂಗ)**

**ಗೆ,**

1. ನೋಡೆಲ್ ಅಧಿಕಾರಿಗಳು, ವೆಬ್‌ಸೈಟ್ ನಿರ್ವಹಣೆ, ಕರಾಮುವಿ. ವಿಶ್ವವಿದ್ಯಾನಿಲಯದ ಅಂತರ್‌ಜಾಲದಲ್ಲಿ ಪ್ರಕಟಿಸುವಂತೆ ಕ್ರಮವಹಿಸುವುದು.
2. ಎಲ್ಲಾ ಪ್ರಾದೇಶಿಕ ನಿರ್ದೇಶಕರುಗಳು, ಕರಾಮುವಿ ಪ್ರಾದೇಶಿಕ ಕೇಂದ್ರಗಳು,ಕರಾಮುವಿ